# ಸಂಕಲನಾತ್ಮಕ ಮೌಲ್ಯಮಾಪನ
## [Summative Assessment ]

ಸಂಕಲನಾತ್ಮಕ ಮೌಲ್ಯಮಾಪನವೆಂದರೆ ಒಂದು ಘಟ್ಟದ ಅಂತ್ಯದಲ್ಲಿ ಒಟ್ಟು ಕಲಿಕೆಯನ್ನು ಪತ್ತೆ ಹಚ್ಚಿ ವಿದ್ಯಾರ್ಥಿಯ ಪ್ರಗತಿಯನ್ನು ಅರ್ಥೈಸಿಕೊಂಡು ಹಿಮ್ಮಾಹಿತಿ ನೀಡುವ ಪ್ರಕ್ರಿಯೆಗೆ ಸಂಕಲನಾತ್ಮಕ ಮೌಲ್ಯಮಾಪನ ಎನ್ನುವರು.

ಒಂದು ವರ್ಷದಲ್ಲಿ 02 ಸಂಕಲನಾತ್ಮಕ ಪರೀಕ್ಷೆಗಳು ನಡೆಯುತ್ತವೆ.

# ಪ್ರಶ್ನೆ ಪತ್ರಿಕೆ ರಚನೆಯಲ್ಲಿ  ಗಮನಿಸುವ ಅಂಶಗಳು

1 ಪ್ರಶ್ನೆ ಪತ್ರಿಕೆಯನ್ನು ರಚಿಸುವ ಶಿಕ್ಷಕರು ವಿಷಯದ ಜ್ಞಾನ ಬೋಧನೆಗಳ ಉದ್ದೇಶ ಆ ಉದ್ದೇಶಗಳನ್ನು ಸಾಧಿಸಲು ಅನುಸರಿಸುವ ಮಾರ್ಗೋಪಾಯಗಳ ಅರಿವಿರಬೇಕು.

2 ಪ್ರಶ್ನೆ ಪತ್ರಿಕೆಯು ಕಲಿಕಾ ಫಲವನ್ನು ಹಳೆಯುವ ಸಾಧನವಾಗಿರಬೇಕು.

3 ಪ್ರಶ್ನೆ ಪತ್ರಿಕೆಯು ಎಲ್ಲಾ ಕಲಿಕಾಂಶಗಳ ಮೇಲೆ ಸಮಾನ ಪ್ರಾತಿನಿಧ್ಯವನ್ನು ನೀಡಬೇಕು.

4 ಪ್ರಶ್ನೆ ಪತ್ರಿಕೆಯು ಸರಳತೆಯಿಂದ ಕಠಿಣತೆಯ ಕಡೆಗೆ ಸಾಗುವಂತಿರಬೇಕು.

5 ಪ್ರಶ್ನೆ ಪತ್ರಿಕೆಯಲ್ಲಿ ಬೋಧನಾ ಸಾಮಾರ್ಥ್ಯಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳಿರಬೇಕು.

6 ಪಾಠಬೋಧನೆಯನ್ನು ಉತ್ತಮೀಕರಣಗೊಳಿಸಲು ಅವಕಾಶವಿರಬೇಕು.

7 ಪ್ರಶ್ನೆ ಪತ್ರಿಕೆಯನ್ನು ಮನೋವೈಜ್ಞಾನಿಕವಾಗಿ ತಯಾರಿಸಬೇಕು.

8 ಪ್ರಶ್ನೆ ಪತ್ರಿಕೆಯು ಕೇವಲ ಪ್ರಶ್ನೆಗಳ ಸಂಗ್ರಹವಲ್ಲ ಇದು ಒಂದು ಬೋಧನಾ ಕಲಿಕಾ ಪ್ರಕ್ರಿಯೆ ಪರಿಣಾಮವನ್ನು ಸೂಚಿಸುವ ಸಾಧನವಾಗಿರಬೇಕು.

# ಪ್ರಶ್ನೆ ಪತ್ರಿಕೆ ತಯಾರಿಕೆ ಹಂತಗಳು :

1. ಉದ್ದಿಷ್ಟಾಧಾರಿತ ಶೇಕಡವಾರು ಅಂಕಗಳ ಹಂಚಿಕೆ
2. ಅಧ್ಯಾಯವಾರು ಅಂಕ'ಗಳ ಹಂಚಿಕೆ
3. ಪ್ರಶ್ನೆಗಳ ಸ್ವರೂಪ ಆಧರಿಸಿ ಶೇಕಡವಾರು ಅಂಕಗಳ ಹಂಚಿಕೆ
4. ಕ್ಲಿಷ್ಟತೆಯ ಮಟ್ಟ ಆಧರಿಸಿ ಶೇಕಡವಾರು ಅಂಕಗಳ ಹಂಚಿಕೆ
5. ನೀಲನಕ್ಷೆ ಸಿದ್ಧತೆ / ತಯಾರಿ.
6. ನೀಲನಕ್ಷೆ ಪ್ರಕಾರ ಪ್ರಶ್ನೆಪತ್ರಿಕೆ ಸಿದ್ಧತೆ.
7. ಉತ್ತರ ಸೂಚಿ ಮತ್ತು ಅಂಕ ವಿತರಣೆ.
8. ಪ್ರಶ್ನೆವಾರು ವಿಶ್ಲೇಷಣೆ ಅಂಕಗಳ ಹಂಚಿಕೆ.

# ಹಂತ-1: ಉದ್ದಿಷ್ಟಗಳನ್ನು ಆಧರಿಸಿ ಶೇಕಡವಾರು ಅಂಕಗಳ ಹಂಚಿಕೆ.

ಕಲಿಕಾ ವಿಷಯಗಳು ಕೆಲವು ಉದ್ದಿಷ್ಟಗಳನ್ನು ಹೊಂದಿರುತ್ತವೆ. ಪ್ರಶ್ನೆಪತ್ರಿಕೆಯನ್ನು ತಯಾರಿಸುವಾಗ ಯಾವ ಉದ್ದಿಷ್ಟಕ್ಕೆ ಎಷ್ಟು ಒತ್ತು ನೀಡಬೇಕು? ಎಂಬುದನ್ನು ನಿರ್ಧರಿಸುವ ಹಂತವಿದು. ಈ ಕೆಳಗಿನ ರೀತಿಯಲ್ಲಿ ಉದ್ದಿಷ್ಟಗಳಿಗೆ ಶೇಕಡವಾರು ಅಂಕಗಳನ್ನು ಹಂಚಬೇಕು. ಇಲ್ಲಿ ಪ್ರಶ್ನೆಗಳು ಎಷ್ಟು ಇರಬೇಕು ಎಂಬುದನ್ನು ಶಿಕ್ಷಕರ ವಿವೇಚನೆಗೆ ಬಿಡಲಾಗಿದೆ.

**ಉದ್ದಿಷ್ಟ:** ಬೋಧನೆ ಉದ್ದೇಶಗಳನ್ನು ಕಲಿಯಲು ಅಥವಾ ಈಡೇರಿಸಲು ಇರುವ ಘಟಕ

**ನಿರ್ದಿಷ್ಟ:** ಉದ್ದಿಷ್ಟಗಳನ್ನು ನಿರ್ಧರಿಸಲು ಅನುಸರಿಸುವ ವಿವಿಧ ವಿಧಾನಗಳು/ಮಾರ್ಗಗಳು

| ಕ್ರ. ಸಂ | ಉದ್ದಿಷ್ಟ | ನಿರ್ದಿಷ್ಟ |
|---|---|---|
| 1 | ಜ್ಞಾನ | ಸ್ಮರಿಸು, ಗುರುತಿಸು |
| 2 | ತಿಳುವಳಿಕೆ | ವಿವರಣೆ, ವ್ಯತ್ಯಾಸ, ಹೋಲಿಕೆ, ವ್ಯಾಖ್ಯಾನಿಸು, ಲಕ್ಷಣ, ಕಾರಣ |
| 3 | ಅನ್ವಯ | ವೈಜ್ಞಾನಿಕ ಕಾರಣ, ಸಮರ್ಥಿಸು, ಸಂದರ್ಭಗಳನ್ನು ತಿಳಿಸು, ಹೊಸ ಸನ್ನಿವೇಶದಲ್ಲಿ ಅನ್ವಯಿಸುವುದು |
| 4 | ಕೌಶಲ್ಯ | ಚಿತ್ರ ಬಿಡಿಸು, ಅಂಕಣ ಗುರುತಿಸು ಸಂಕೇತಗಳನ್ನು ಹೆಸರಿಸು, ತಳಕು ಹಾಕುವ ವಿಧಾನ |

| ಕ್ರ. ಸಂ | ಉದ್ಧಿಷ್ಟ | ಶೇಕಡವಾರು ಅಂಕಗಳು | ನಿಗದಿಪಡಿಸಿದ ಅಂಕಗಳು | ಪ್ರಶ್ನೆಗಳು |
|---|---|---|---|---|
| 1. | ಜ್ಞಾನ | 35% | 28 | 18 |
| 2. | ತಿಳುವಳಿಕೆ | 50% | 40 | 23 |
| 3. | ಅನ್ವಯ | 10% | 08 | 03 |
| 4. | ಕೌಶಲ್ಯ | 05% | 04 | 01 |
| | ಒಟ್ಟು | 100% | 80 | 45 |

# 1. ಜ್ಞಾನ ಎಂದರೇನು ? (Knowledge)

- ವಿದ್ಯಾರ್ಥಿಯು ಓದಿದ ವಿಷಯಗಳನ್ನು ಸ್ಮರಿಸಿಕೊಂಡು / ನೆನಪಿಸಿಕೊಂಡು ಗುರುತಿಸುವುದನ್ನು ಜ್ಞಾನ ಎನ್ನುವರು.

- ವಿದ್ಯಾರ್ಥಿ ತನ್ನ ಪರಿಸರದಿಂದ, ಶಿಕ್ಷಕರಿಂದ, ಸಹಪಾಠಿಗಳಿಂದ, ಕುಟುಂಬದ ಸದಸ್ಯರಿಂದ, ಶಿಕ್ಷಕರ ಮಾರ್ಗದರ್ಶನದ ಮೂಲಕ ಸ್ಮರಣೆಯಲ್ಲಿ (ನೆನಪಿನಲ್ಲಿ) ಸಂಚಿತ (ಸಂಗ್ರಹಿಸಿ) ಮಾಡಿಕೊಂಡ ಬುದ್ಧಿ ಸಾಮರ್ಥ್ಯಕ್ಕೆ ಜ್ಞಾನ ಎನ್ನುವರು.

# ಉದಾಹರಣೆ :

- ಯಾರು?
- ಯಾವಾಗ?
- ಎಲ್ಲಿ ?
- ಯಾವ್ರದು?
- ಯಾರಿಂದ?
- ಏನು ?
- ಎಷ್ಟು ?

# 2. ತಿಳುವಳಿಕೆ / ಅರಿವು / ಗ್ರಹಿಕೆ ಎಂದರೇನು ?

# Understanding

- ಪೂರ್ವ ಜ್ಞಾನದ ಆಧಾರಲ್ಲಿ ತಿಳಿದಿರುವ ವಿಷಯದ ಬಗ್ಗೆ ವಿದ್ಯಾರ್ಥಿಯು ತಾರ್ಕಿಕವಾಗಿ ಆಲೋಚನೆ ಮಾಡಿ ಲಘು ವಿವರದೊಂದಿಗೆ ತಿಳಿಸುವುದು/ಬರೆಯುವುದು.

- ಮಗುವಿನ ಸ್ವತಃ ಬುದ್ಧಿವಂತಿಕೆಯಿಂದ ಮಾಡುವುದೇ *ತಿಳುವಳಿಕೆ* ಎನ್ನುವರು.
- ಜ್ಞಾನದ ಮುಂದಿನ ಹಂತವೇ ತಿಳುವಳಿಕೆ

# ಉದಾಹರಣೆ :

- - ಏಕೆ
- - ಹೇಗೆ
- - ಕಾರಣ
- - ಉದಾ
- - ಗುರಿ
- - ಉದ್ದೇಶಗಳು
- - ವಿವರಿಸು
- - ಸಂಕ್ಷಿಪ್ತವಾಗಿ ಬರೆಯುವುದು
- - ಟಿಪ್ಪಣಿ ಬರೆಯುವುದು

# ಉದಾಹರಣೆ :

- – ಹೋಲಿಕೆ
- – ಅನುಕೂಲ, ಅನಾನುಕೂಲ
- – ವ್ಯತ್ಯಾಸ
- – ಲಕ್ಷಣಗಳು
- – ಕ್ರಮಬದ್ಧವಾಗಿ ಬರೆಯುವುದು
- – ಪಾತ್ರ
- – ಸಾಧನೆ
- – ಮಹತ್ವ/ಪ್ರಾಮುಖ್ಯತೆ
- – ಹೊಂದಿಸಿ ಬರೆಯಿರಿ
- – ಗುಂಪಿಗೆ ಸೇರದ ಪದ
- – ಬಹುಆಯ್ಕೆ

# ೩. ಅನ್ವಯ (Application)

ತನ್ನ ಅನುಭವದಲ್ಲಿ ಮತ್ತು ಇತರರ ಮಾರ್ಗದರ್ಶನದಲ್ಲಿ ಪಡೆದ ಜ್ಞಾನವನ್ನು ತಿಳುವಳಿಕೆಗೆ ತಂದುಕೊಂಡು ತನ್ನ ನಿತ್ಯ ಜೀವನದ ಸಂದರ್ಭಗಳಲ್ಲಿ ಬಳಕೆ ಮಾಡಿಕೊಳ್ಳುವುದೇ ಅನ್ವಯ ಆಗಿದೆ.

**ಉದಾಹರಣೆ:**

- ★ ವೈಜ್ಞಾನಿಕ ಕಾರಣ ಕೊಡಿ
- ★ ಸಮರ್ಥಿಸಿರಿ
- ★ ಸಂದರ್ಭಗಳನ್ನು ತಿಳಿಸಿ
- ★ ಹೊಸ ಸನ್ನಿವೇಶದಲ್ಲಿ ಅನ್ವಯಿಸುವುದು

ನಿಮ್ಮ ಮನೆಯಲ್ಲಿ ಉಂಟಾಗ ಬಹುದಾದ ಈ ಕೆಳಗಿನ ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ನೀವು ತೆಗೆದುಕೊಳ್ಳುವ ಕ್ರಮ ಯಾವುದು

•ಪ್ಲಾಸಿಕ್, * ತರಕಾರಿ ಸಿಪ್ಪೆಗಳು
•ಖಾಲಿ ಡಬ್ಬಗಳು * ಬಟ್ಟೆತೊಳೆದ ನೀರು

# 4. ಕೌಶಲ್ಯ ಎಂದರೇನು? (Skill)

- ಜ್ಞಾನ, ತಿಳುವಳಿಕೆ ಮತ್ತು ವಿಮರ್ಶಾತ್ಮಕ ಚಿಂತನೆ ಇವುಗಳ ಮುಂದಿನ ಹಂತವೇ ಕೌಶಲ್ಯ ಆಗಿದೆ.
- ಕಲಿತ ಚಲನೆಗಳು ಪರಿಷ್ಕರಣೆಗೊಂಡು ಅವುಗಳ ಮೇಲೆ ಪ್ರಭುತ್ವ ಸಾಧಿಸಿದಾಗ ಅವುಗಳನ್ನು ಕೌಶಲ್ಯ ಎನ್ನುವರು.

ಉದಾಹರಣೆ:

- ★ ಚಿತ್ರ ಬಿಡಿಸು
- ★ ಅಂಕಣ ಗುರುತಿಸು
- ★ ಕ್ರೀಡೋಪಕರಣಗಳನ್ನು ಗುರುತಿಸು

# 02 ಪಠ್ಯಾಂಶಗಳಿಗೆ ಶೇಕಡವಾರು ಅಂಕಗಳ ಹಂಚಿಕೆ

| ಕ್ರಮ | ಅಧ್ಯಾಯ | ಶೇಕಡಾ | ಅಂಕ | ಪ್ರಶ್ನೆ |
|---|---|---|---|---|
| 1 | ಆಧುನಿಕ ಒಲಿಂಪಿಕ್ಸ್ ಮತ್ತು ಏಷಿಯನ್ ಕ್ರೀಡೆಗಳು | 5% | 04 | 02 |
| 2 | ವಾಲಿಬಾಲ್ | 2.5% | 02 | 01 |
| 3 | ಹಾಕಿ | 7.5% | 06 | 02 |
| 4 | ಹ್ಯಾಂಡ್ ಬಾಲ್ | 2.5% | 02 | 02 |
| 5 | ಬಾಸ್ಕೆಟ್ ಬಾಲ್ | 6.25% | 05 | 04 |
| 6 | ಬ್ಯಾಡ್ಮಿಂಟನ್ | 11.25% | 09 | 06 |
| 7 | ಅಡೆತಡೆ ಓಟಗಳು | 10% | 08 | 05 |
| 8 | ನಡಿಗೆ | 7.5% | 06 | 04 |
| 9 | ಚಕ್ರ ಎಸೆತ | 7.5% | 06 | 03 |
| 10 | ಧ್ಯಾನ | 5% | 04 | 02 |
| 11 | ಸಮುದಾಯ ಆರೋಗ್ಯ | 7.5% | 06 | 02 |
| 12 | ಪ್ರಥಮ ಚಿಕಿತ್ಸೆ | 5% | 04 | 03 |
| 13 | ಸಾಂಕ್ರಾಮಿಕ ರೋಗಗಳು | 7.5% | 06 | 04 |
| 14 | ಜೀವನ ಶೈಲಿಯ ರೋಗಗಳು | 8.75% | 07 | 03 |
| 15 | ರಾಷ್ಟ್ರೀಯ ಭಾವೈಕ್ಯತೆ | 6.25% | 05 | 02 |
| | | 100% | 80 | 45 |

# ಹಂತ-3: ಪ್ರಶ್ನೆ-ಸ್ವರೂಪ ಆಧರಿಸಿ ಶೇಕಡವಾರು ಅಂಕಗಳ ಹಂಚಿಕೆ.

| ಕ್ರ.ಸಂ | ಸ್ವರೂಪ | ಶೇಕಡ | ಅಂಕ | ಪ್ರಶ್ನೆ |
|---|---|---|---|---|
| 01 | ವಸ್ತು ನಿಷ್ಠ | 16.25% | 13 | 13 |
| 02 | ಕಿರು ಉತ್ತರ -1 | 10% | 08 | 08 |
| 03 | ಕಿರು ಉತ್ತರ -2 | 40% | 32 | 16 |
| 04 | ದೀರ್ಘ ಉತ್ತರ-1 | 18.75% | 15 | 05 |
| 05 | ದೀರ್ಘ ಉತ್ತರ-2 | 10% | 08 | 02 |
| 06 | ಅಂಕಣ ಗುರುತು | 05% | 04 | 01 |
| | ಒಟ್ಟು | 100% | 80 | 45 |

# ಪ್ರಶ್ನೆಗಳ ವಿಧಗಳು

- ವಸ್ತುನಿಷ್ಠ ಪ್ರಶ್ನೆಗಳು
- ಕಿರು ಉತ್ತರದ ಪ್ರಶ್ನೆಗಳು
- ದೀರ್ಘ ಉತ್ತರದ ಪ್ರಶ್ನೆಗಳು

# 1. ವಸ್ತುನಿಷ್ಠ ಪ್ರಶ್ನೆಗಳು ಎಂದರೇನು ?

- ಯಾವ ಪ್ರಶ್ನೆಗಳ ಉತ್ತರದ ಮೌಲ್ಯಮಾಪನದಲ್ಲಿ ಮೌಲ್ಯ ಮಾಪಕನ ವೈಯಕ್ತಿಕ ಅಂಶಗಳು ಪ್ರಭಾವ ಬೀರುವುದಿಲ್ಲವೋ ಅಂತಹ ಪ್ರಶ್ನೆಗಳನ್ನು ವಸ್ತುನಿಷ್ಠ ಪ್ರಶ್ನೆಗಳು ಎನ್ನುವರು.

* ಇವು ಒಂದು ಸರಳ ಪದದ ಉತ್ತರವನ್ನು ನಿರೀಕ್ಷಿಸುತ್ತವೆ.

* ವೈವಿಧ್ಯಮಯವಾದ ಪ್ರಶ್ನೆಗಳನ್ನು ಒಳಗೊಂಡಿರುವುದರಿಂದ ವಿದ್ಯಾರ್ಥಿಗಳಲ್ಲಿ ಹೆಚ್ಚು ಆಸಕ್ತಿಯನ್ನು ಮೂಡಿಸುತ್ತವೆ.

* ಉತ್ತರಿಸಲು ಹೆಚ್ಚು ಸಮಯಾವಕಾಶವನ್ನು ಬಯಸುವುದಿಲ್ಲ.

ವಸ್ತುನಿಷ್ಠ ಪ್ರಶ್ನೆಗಳ ವಿಧಗಳು:

- ಬಹು ಆಯ್ಕೆಯ ಪ್ರಶ್ನೆಗಳು
- ಬಿಟ್ಟ ಸ್ಥಳ ತುಂಬುವುದು
- ಹೊಂದಿಸಿ ಬರೆಯುವುದು
- ಸರಿಪಡಿಸಿ ಬರೆಯುವುದು
- ವರ್ಗೀಕರಿಸುವುದು
- ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯುವುದು
- ಸಂಬಂಧ ಕಲ್ಪಿಸಿ ಬರೆಯುವುದು.

# ೨. ಕಿರು ಉತ್ತರ ಪ್ರಶ್ನೆಗಳು ಎಂದರೇನು ?

- ಪೂರ್ಣ ವಾಕ್ಯ ರೂಪದ ಉತ್ತರವನ್ನು ಬಯಸುವ ಪ್ರಶ್ನೆಗಳನ್ನು *ಕಿರು ಉತ್ತರದ ಪ್ರಶ್ನೆಗಳು* ಎನ್ನುತ್ತೇವೆ.

- ಈ ಪ್ರಶ್ನೆಗಳಿಗೆ ಒಂದರಿಂದ ಮೂರು ವಾಕ್ಯಗಳವರೆಗೆ ಉತ್ತರವನ್ನು ನಿರೀಕ್ಷಿಸಬಹುದು.

# ತ. ದೀರ್ಘ ಉತ್ತರದ ಪ್ರಶ್ನೆಗಳು

- ಈ ಹಂತದಲ್ಲಿ ಅಪೇಕ್ಷಿತ ಉತ್ತರಗಳು ದೀರ್ಘವಾಗಿದ್ದು ವಿದ್ಯಾರ್ಥಿಗಳು ಅನೇಕ ವಿಷಯಗಳನ್ನು ಸ್ಮರಿಸಿಕೊಂಡು, ಚಿಂತಿಸಿ, ಅರ್ಥೈಸಿಕೊಂಡು ವಿವರಣೆಗಳೊಂದಿಗೆ ಉತ್ತರಿಸಬೇಕಾಗುತ್ತದೆ.

# ಗುಣಲಕ್ಷಣಗಳು ಮತ್ತು ಪ್ರಾಮುಖ್ಯತೆ

- ವಿದ್ಯಾರ್ಥಿಗಳ ಪೂರ್ಣ ಪ್ರಮಾಣ ಕಲಿಕಾ ಮಟ್ಟವನ್ನು ಗುರುತಿಸಲು ಅನುಕೂಲವಾಗುವಂತಿರಬೇಕು.
- ಕಡಿಮೆ ಅವಧಿಯಲ್ಲಿ ವಿದ್ಯಾರ್ಥಿಗಳ ಹೆಚ್ಚಿನ ಕಲಿಕಾ ಸಾಮರ್ಥ್ಯವನ್ನು ಪರೀಕ್ಷಿಸಲು ಸಹಕಾರಿಯಾಗಿರಬೇಕು.
- ಸ್ವಂತ ಅಭಿಪ್ರಾಯ ಸೃಜನಶೀಲ ಉತ್ತರಕ್ಕೆ ಹೆಚ್ಚಿನ ಅವಕಾಶವಿರಬೇಕು.
- ವಿಷಯದ ಬಗೆಗೆ ವಿದ್ಯಾರ್ಥಿಗಳು ಹೊಂದಿರುವ ಸಹಜ ಜ್ಞಾನವನ್ನು ತಿಳಿಯಲು ಸಾಧ್ಯವಾಗುವಂತಿರಬೇಕು.

# ಹಂತ-4: ಕಠಿಣತೆಯ ಮಟ್ಟ ಆಧರಿಸಿ ಶೇಕಡವಾರು ಅಂಕಗಳ ಹಂಚಿಕೆ.

- ಮೇಲಿನ ಮೂರು ಹಂತಗಳಿಗೆ ಹೊಂದುವಂತೆ ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಪ್ರಶ್ನೆಗಳನ್ನು ರಚಿಸುವ ಹಂತವಿದು. ಪ್ರಶ್ನೆಗಳ ಸರಳತೆಯನ್ನು ಸುಲಭದಿಂದ ಕಠಿಣತೆ ಕಡೆಗೆ ಸಾಗುವಂತೆ ನೋಡಿಕೊಳ್ಳಬೇಕು

| ಕ್ರ.ಸಂ | ಕಠಿಣತೆ ಮಟ್ಟ | ಶೇಕಡ | ಅಂಕ | ಪ್ರಶ್ನೆ |
|---|---|---|---|---|
| 01 | ಸುಲಭ | 30% | 24 | 17 |
| 02 | ಸಾಧಾರಣ | 50% | 40 | 21 |
| 03 | ಕಠಿಣ | 20% | 16 | 07 |
| | ಒಟ್ಟು | 100% | 80 | 45 |

# ಪ್ರಶ್ನೆಯ ಸ್ವರೂಪಗಳಿಗೆ ನೀಡಿರುವ ಪ್ರಾಮುಖ್ಯತೆ

| ಕ್ರ.ಸಂ. | ಪ್ರಶ್ನೆ ವಿನ್ಯಾಸ | ಪ್ರಶ್ನೆ ಸಂಖ್ಯೆ | ಅಂಕಗಳು |
|---|---|---|---|
| 01 | ಬಹು ಆಯ್ಕೆ | 1 ಅಂಕದ 8 ಪ್ರಶ್ನೆಗಳು | 1x8=8 |
| 02 | ಹೊಂದಿಸಿ ಬರೆಯಿರಿ | 1 ಅಂಕದ 5 ಪ್ರಶ್ನೆಗಳು | 1x5=5 |
| 03 | 1 ಅಂಕದ ಪ್ರಶ್ನೆಗಳು | 1 ಅಂಕದ 8 ಪ್ರಶ್ನೆಗಳು | 1x8=8 |
| 04 | 2 ಅಂಕದ ಪ್ರಶ್ನೆಗಳು | 2 ಅಂಕದ 16 ಪ್ರಶ್ನೆಗಳು | 2x16=32 |
| 05 | 3 ಅಂಕದ ಪ್ರಶ್ನೆಗಳು | 3 ಅಂಕದ 5 ಪ್ರಶ್ನೆಗಳು | 3x5=15 |
| 06 | 4 ಅಂಕದ ಪ್ರಶ್ನೆಗಳು | 4 ಅಂಕದ 3 ಪ್ರಶ್ನೆಗಳು | 4x3=12 |
| | ಒಟ್ಟು | 45 | 80 |

# ಉದ್ದಿಷ್ಟಗಳಿಗೆ ನೀಡಿರುವ ಪ್ರಾಮುಖ್ಯತೆ

| ಉದ್ದಿಷ್ಟಗಳು | ಬಹು ಆಯ್ಕೆ | ಹೊಂದಿಸಿ ಬರೆಯಿರಿ | ಕಿ.ಉ–1 ಅಂಕ | ಕಿ.ಉ–2 ಅಂಕ | ದಿ.ಉ–3 ಅಂಕ | ದಿ.ಉ–4 ಅಂಕ | ಚಿತ್ರ | ಒಟ್ಟು ಅಂಕಗಳು | ಶೇಕಡ |
|---|---|---|---|---|---|---|---|---|---|
| ಜ್ಞಾನ | 5x1=5 | – | 4x1=4 | 8x2=16 | 1x3=3 | - | – | 28 | 35% |
| ತಿಳುವಳಿಕೆ | 3x1=3 | 5x1=5 | 4x1=4 | 6x2=12 | 4x3=12 | 1x4=4 | – | 40 | 50% |
| ಅನ್ವಯ | - | – | - | 2x2=4 | – | 1x4=4 | – | 08 | 10% |
| ಕೌಶಲ | - | – | - | – | – | – | 1x4=4 | 04 | 05% |
| ಒಟ್ಟು | 8x1=8 | 5x1=5 | 8x1=8 | 16x2=32 | 5x3=15 | 2x4=8 | 1x4=4 | 80 | 100% |

# ಹಂತ 5 : ನೀಲ ನಕ್ಷೆ ಸಿದ್ಧತೆ

- ನೀಲ ನಕ್ಷೆ ಎಂದರೇನು ?
  - ಉದ್ದಿಷ್ಟಾಧಾರಿತ
  - ಪಠ್ಯಾಧಾರಿತ
  - ಪ್ರಶ್ನೆ ಸ್ವರೂಪಾಧಾರಿತ ಮತ್ತು
  - ಕಠಿಣತೆ ಆಧರಿಸಿಕೊಂಡು

- ಈ ನಾಲ್ಕು ಹಂತಗಳನ್ನು ಯೋಜಿಸಿರುವ ಅಂಶಗಳನ್ನು ಪರಸ್ಪರ ಹೊಂದಿಸಿ ತಯಾರಿಸಿದ ಪ್ರಶ್ನೆ ಪತ್ರಿಕೆಯ ರೂಪರೇಷೆಯೇ ನೀಲನಕ್ಷೆ.

# ನೀಲ ನಕ್ಷೆ ರಚನೆಯಲ್ಲಿ ದೊರೆಯುವ ಪ್ರಯೋಜನಗಳು

- ಪ್ರಶ್ನೆ ಪತ್ರಿಕೆ ರಚನೆಯು ಹೆಚ್ಚು ವಿಶ್ವಾಸರ್ಹತೆಯಿಂದ ಕೂಡಿರುತ್ತದೆ.
- ಬೋಧನ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಪಠ್ಯಾಂಶಗಳನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗುತ್ತದೆ.
- ಯಾವ ಯಾವ ಪಠ್ಯಾಂಶಗಳಿಗೆ ಎಷ್ಟೆಷ್ಟು ಅಂಕಗಳನ್ನು ಪ್ರಾತಿನಿತ್ಯ ನೀಡಲು ಸಾಧ್ಯವಾಗುತ್ತದೆ.
- ಪಠ್ಯ ಬೋಧನೆಯ ಉದ್ದೇಶಗಳನ್ನು ವಿದ್ಯಾರ್ಥಿಗಳು ತಮ್ಮ ಕಲಿಕೆ ಸಾಧಿಸಿದ್ದಾರೆಯೇ ಎಂಬುದನ್ನು ತಿಳಿಯಲು ಸಾಧ್ಯಾವಾಗುತ್ತದೆ.
- ಪಠ್ಯದಲ್ಲಿರುವ ಎಲ್ಲಾ ಅಂಶಗಳಿಗೆ ಸಮಾನವಾಗಿ ಸಮಾನ ಪ್ರಾತಿನಿತ್ಯ ನೀಡಲು ಸಹಕಾರಿಯಾಗಲಿದೆ.
- ಮೇಲಿನ ಅಂಶಗಳ ಹಿನ್ನಲೆ ಪ್ರಶ್ನೆ ಪತ್ರಿಕೆ ರಚನೆ ಮಾಡುವುದರಿಂದ ವೈಜ್ಞಾನಿಕವಾಗಿ ಮೂಡಿಬರಲು ನೆರವಾಗುತ್ತದೆ.

| ಕ್ರಸ | ಅಧ್ಯಾಯಗಳು | ಜ್ಞಾನ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ | ಒಟ್ಟು ಅಂಕಗಳು | ಒಟ್ಟು ಪ್ರಶ್ನೆಗಳು |
|---|---|---|---|---|---|---|---|---|---|---|---|---|---|---|---|---|---|---|---|
| | | ವಸ್ತುನಿಷ್ಠ | ಕಿರು ಉತ್ತರ. 1 | ಕಿರು ಉತ್ತರ.2 | ದೀರ್ಘ ಉತ್ತರ–1 | ದೀರ್ಘ ಉತ್ತರ–2 | ವಸ್ತುನಿಷ್ಠ | ಕಿರು ಉತ್ತರ.1 | ಕಿರು ಉತ್ತರ. 2 | ದೀರ್ಘ ಉತ್ತರ–1 | ದೀರ್ಘ ಉತ್ತರ–2 | ವಸ್ತುನಿಷ್ಠ | ಕಿರು ಉತ್ತರ.1 | ಕಿರು ಉತ್ತರ.2 | ದೀರ್ಘ ಉತ್ತರ–1 | ದೀರ್ಘ ಉತ್ತರ–2 | | | |
| 1 | ಆಧುನಿಕ ಒಲಿಂಪಿಕ್ಸ್ ಮತ್ತು ಏಷಿಯನ್ ಕ್ರೀಡೆಗಳು | | | 1(2) | | | | | 1(2) | | | | | | | | | 04 | 02 |
| 2 | ವಾಲಿಬಾಲ್ | | | 1(2) | | | | | | | | | | | | | | 02 | 01 |
| 3 | ಹಾಕಿ | | | 1(2) | | | | | | | 1(4) | | | | | | | 06 | 02 |
| 4 | ಹ್ಯಾಂಡ್ ಬಾಲ್ | 1(1) | | | | | 1(1) | | | | | | | | | | | 02 | 02 |
| 5 | ಬಾಸ್ಕೆಟ್ ಬಾಲ್ | 1(1) | 1(1) | | | | 1(1) | | 1(2) | | | | | | | | | 05 | 04 |
| 6 | ಬ್ಯಾಡ್ಮಿಂಟನ್ | 1(1) | 1(1) | | 1(3) | | 1(1) | 1(1) | 1(2) | | | | | | | | | 09 | 06 |
| 7 | ಅಡೆತಡೆ ಓಟಗಳು | | 1(1) | | | | 1(1) | 1(1) | 1(2) | 1(3) | | | | | | | | 08 | 05 |
| 8 | ನಡಿಗೆ | 1(1) | | | | | 1(1) | 1(1) | | 1(3) | | | | | | | | 06 | 04 |
| 9 | ಚಕ್ರ ಎಸೆತ | 1(1) | | | | | 1(1) | | | | | | | | | | 1(4) | 06 | 03 |
| 10 | ಧ್ಯಾನ | | | 1(2) | | | | | 1(2) | | | | | | | | | 04 | 02 |
| 11 | ಸಮುದಾಯ ಆರೋಗ್ಯ | | | 1(2) | | | | | | | | | | | | 1(4) | | 06 | 02 |
| 12 | ಪ್ರಥಮ ಚಿಕಿತ್ಸೆ | | 1(1) | | | | 1(1) | | 1(2) | | | | | | | | | 04 | 03 |
| 13 | ಸಾಂಕ್ರಾಮಿಕ ರೋಗಗಳು | | | 1(2) | | | 1(1) | 1(1) | | | | | | 1(2) | | | | 06 | 04 |
| 14 | ಜೀವನ ಶೈಲಿಯ ರೋಗಗಳು | | | 1(2) | | | | | | 1(3) | | | | 1(2) | | | | 07 | 03 |
| 15 | ರಾಷ್ಟ್ರೀಯ ಭಾವೈಕ್ಯತೆ | | | 1(2) | | | | | | 1(3) | | | | | | | | 05 | 02 |
| | ಒಟ್ಟು ಪ್ರಶ್ನೆಗಳು | 05 | 04 | 08 | 01 | 00 | 08 | 04 | 06 | 04 | 01 | 00 | 00 | 02 | 00 | 01 | 01 | – | 45 |
| | ಒಟ್ಟು ಅಂಕಗಳು | 05 | 04 | 16 | 03 | 00 | 08 | 04 | 12 | 12 | 04 | 00 | 00 | 04 | 00 | 04 | 04 | 80 | – |

# ಹಂತ 6: ನೀಲನಕ್ಷೆಯ ಪ್ರಕಾರ ಪ್ರಶ್ನೆ ಪತ್ರಿಕೆ ರಚನೆ

- ಈ ಹಿಂದೆ ಸೂಚಿಸಿದ ಐದು ಹಂತಗಳ ಆಧಾರದಿಂದ ಪ್ರಶ್ನೆಗಳನ್ನು ಸುಲಭದಿಂದ ಕಠಿಣತೆಯ ಕಡೆಗೆ ಸಾಗುವಂತೆ ರಚಿಸಬೇಕು.

- ಪ್ರಶ್ನೆ ಪತ್ರಿಕೆ ರಚನೆಯಲ್ಲಿ ಯಾವುದೇ ಕಾರಣಕ್ಕೂ ಗೊಂದಲಗಳಿಗೆ ಅವಕಾಶವಿರದಂತೆ ಪ್ರಶ್ನೆಗಳನ್ನು ರಚಿಸಬೇಕು.

# ಹಂತ 7: ಉತ್ತರ ಸೂಚಿ ಮತ್ತು ಅಂಕ ವಿತರಣೆ

1. ಪ್ರತಿಯೊಂದು ನಿರೀಕ್ಷಿತ ಉತ್ತರಗಳನ್ನು ಈ ಹಂತದಲ್ಲಿ ಸೂಚಿಸಬೇಕು. ದೀರ್ಘ ಉತ್ತರದ ಪ್ರಶ್ನೆಗಳ ಮುಖ್ಯಾಂಶಗಳನ್ನು ನಮೂದಿಸಬೇಕು.

2. ಮುಖ್ಯಾಂಶಗಳಿಗೆ ಅಂಕಗಳನ್ನು ನಿಗದಿಗೊಳಿಸುವಾಗ ಭಿನ್ನರಾಶಿಗಳಲ್ಲಿ ನಮೂದಿಸಬೇಕು. ಉದಾ : (1/2)

3. ಮೌಲ್ಯಮಾಪನ ಮಾಡುವಾಗ ಪ್ರಶ್ನೆವಾರು ಉತ್ತರಗಳಿಗೆ ( 1/2) 1 1/2, 2 1/2, 3 1/2) ಭೇದಾಂಶವನ್ನು ನೀಡಬಹುದು. ಕೊನೆಯಲ್ಲಿ ಒಟ್ಟು ಪ್ರಶ್ನೆಗಳ ಉತ್ತರಗಳಿಗೆ ಅಂಕವನ್ನು ಮೊತ್ತ ರೂಪದಲ್ಲಿ ನಿಗದಿಪಡಿಸುವಾಗ ಪೂರ್ಣಾಂಕಗಳಲ್ಲಿಯೇ ನಮೂದಿಸಬೇಕು. ಅಂದರೆ ಒಬ್ಬ ವಿದ್ಯಾರ್ಥಿಯು 40 ಅಂಕಗಳಿಗೆ 21 ½ ಅಂಕ ಪಡೆದಿದ್ದರೆ 22 ಎಂದು ನಮೂದಿಸಬೇಕು.

# ಹಂತ 8 :ಪ್ರಶ್ನೆವಾರು ವಿಶ್ಲೇಷಣೆ

ಪ್ರಶ್ನೆಪತ್ರಿಕೆಯಲ್ಲಿರುವ ಪ್ರಶ್ನೆಗಳನ್ನು ವಿಶ್ಲೇಷಣೆ ಮಾಡುವುದರಿಂದ ಲೋಪದೋಷಗಳನ್ನು ಗುರುತಿಸಲು ಸಾಧ್ಯವಾಗುವುದಲ್ಲದೆ ಪ್ರಶ್ನೆ ಪತ್ರಿಕೆಯ ಪರಿಷ್ಕರಣೆಗೂ ಸಹಾಯವಾಗುತ್ತದೆ. ಈ ವಿಶ್ಲೇಷಣೆಯ ನಮೂನೆಯಲ್ಲಿ ಇಲಿ ನೀಡಲಾಗಿದೆ.

| ಪ್ರ. ಸಂ | ಅಧ್ಯಾಯದ ಹೆಸರು | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆಗಳ ಸ್ವರೂಪ | ಕ್ಲಿಷ್ಟತೆಯ ಮಟ್ಟ | ಅಂಕ | ಸಮಯ |
|---|---|---|---|---|---|---|---|
| 01 | | | | | | | |
| 02 | | | | | | | |
| 03 | | | | | | | |
| 04 | | | | | | | |

ಮೇಲೆ ವಿವರಿಸಿದ 8 ಹಂತಗಳನ್ನು ಸರಿಯಾಗಿ ಅರ್ಥೈಸಿಕೊಂಡು ಪ್ರಶ್ನೆ ಪತ್ರಿಕೆಯನ್ನು ರೂಪಿಸಿದರೆ ಅತ್ಯುತ್ತಮ ಹಾಗೂ ವಿಶ್ವಾಸನೀಯ ಪ್ರಶ್ನೆ ಪತ್ರಿಕೆ ತಯಾರಾಗುವಲ್ಲಿ ಸಂದೇಹವೇ ಇಲ್ಲ. ಉತ್ತಮ ಪ್ರಶ್ನೆ ಪತ್ರಿಕೆಗಳಿಂದ ಸಾಧನೆಯನ್ನು ಮಾಪನ ಮಾಡಲು ಸಾಧ್ಯವಾಗುತ್ತದೆ.



# ವಂದನೆಗಳೊಂದಿಗೆ

ಶ್ರೀನಿವಾಸ ಹೆಚ್.ಟಿ. ಮೈಸೂರು.

ಮೊ.ನಂ.8762855289 / 9740139217